ಈ) ಅರಸೀಕೆರೆ ತಾಲ್ಲೂಕಿನ ಜಾವಗಲ್‌ನಲ್ಲಿ ಸರ್ವೆ ನಂ. 89,90 ಮತ್ತು 91ರ 4.20 ಎಕರೆ ನಿವೇಶನದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುತ್ತಿದೆ. ಈ ಕ್ರೀಡಾಂಗಣದ ಕಾಮಗಾರಿಯನ್ನು 2000ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದೆ.

ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಊ) ಜಾವಗಲ್ ಕ್ರೀಡಾಂಗಣ ನಿರ್ಮಾಣಕ್ಕೆ ಅಂದಾಜಿಸಿದ ವೆಚ್ಚ 14.50 ಲಕ್ಷಗಳ ಪೈಕಿ ಈಗಾಗಲೇ ರೂ. 12.50 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದ್ದು, ಇನ್ನುಳಿಕೆ ರೂ. 2.00 ಲಕ್ಷ ನಿರ್ಮಾಣ ಏಜೆನ್ಸಿಯವರಲ್ಲಿ ಉಳಿದಿದ್ದು, ಈ ಹಣವನ್ನು ವೆಚ್ಚ ಮಾಡಿ ಅಗತ್ಯ ಕಾಮಗಾರಿಯನ್ನು ಪೂರೈಸಲು ಉದ್ದೇಶಿಸಿದೆ. ಇನ್ನೇನಾದರೂ ವೆಚ್ಚವನ್ನು ಭರಿಸಲು ಹಣ ಬೇಕಾದಲ್ಲಿ ಜಿಲ್ಲಾ ಪಂಚಾಯತ್ ಅನುದಾನವನ್ನು ಪಡೆದು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು.

320 (8) ಶ್ರೀ ಬಸವರಾಜು ಹೆಚ್.ಡಿ (ವಿರಾಜಪೇಟೆ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿಖ್ಯಾತ ನಾಗರಹೊಳೆ ಅರಣ್ಯಕ್ಕೆ ಸಂಪರ್ಕ ಕಲ್ಪಿಸುವ ಬಾಳಲೆ–ಮೂರ್ಕಲು ರಸ್ತೆ ಹಾಗೂ ಕುಟ್ಟಮೂರ್ಕಲ್ ರಸ್ತೆಗಳು ಹಾಳಾಗಿದ್ದರೂ ಈ ರಸ್ತೆ ದುರಸ್ಥಿಗೆ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಹಣವನ್ನು ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ಥಿಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಹೌದು

ಆ) ಕೆಳಕಂಡ ಎರಡು ರಸ್ತೆಗಳು ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ವಲಯ ವ್ಯಾಪ್ತಿಯಲ್ಲಿದ್ದು, ಈ ವಲಯದ ವ್ಯಾಪ್ತಿಯಿಂದ ದುರಸ್ಥಿಗಾಗಿ ಕೈಗೊಂಡ ಕ್ರಮ ಇಂತಿದೆ.

ಬಾಳೆಲೆ– ಮೂರ್ಕಲ್ ರಸ್ತೆಯು ಜಿಲ್ಲ ಮುಖ್ಯ ರಸ್ತೆಯ ವರ್ಗಕ್ಕೆ ಸೇರಿದ್ದು, ಈ ಜಿಲ್ಲಾ ಮುಖ್ಯ ರಸ್ತೆಯ ಒಟ್ಟು ಉದ್ದ 4.20 ಕಿ.ಮೀ ಇರುತ್ತದೆ. ಈ ರಸ್ತೆಯ ಕಿಮೀ 0.00 ರಿಂದ 4.20 ಕಿಮೀ ವರೆಗೆ ಗುಡಿ ಮುಚ್ಚುವ ಕಾಮಗಾರಿಗಾಗಿ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಯೋಜನೆಯಡಿ ರೂ. 1.65 ಲಕ್ಷ ಮೊತ್ತಕ್ಕೆ ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭಿಸುವ ಹಂತದಲ್ಲಿದೆ. ಕುಟ್ಟದಿಂದ ಮೂರ್ಕಲದ ವರೆಗೆ ರಸ್ತೆಯ ಒಟ್ಟು ಉದ್ದ 28.20 ಕಿಮೀ ಇದ್ದು ಕುಟ್ಟದಿಂದ ನಾಗರಹೊಳೆ ರಸ್ತೆ (ಒಟ್ಟು ಉದ್ದ 10.00ಕಿಮೀ) ಮತ್ತು ನಾಗರಹೊಳೆ ಮೂರ್ಕಲ್‌ರಸ್ತೆ (ಒಟ್ಟು ಉದ್ದಕಿಮೀ) ಎಂಬ ಎರಡು ಬೇರೆ ಬೇರೆ ಜಿಲ್ಲಾ ಮುಖ್ಯ ರಸ್ತೆಯಾಗಿದೆ.

ಕುಟ್ಟ: ನಾಗರಹೊಳೆ ರಸ್ತೆ 0.00 ಕಿಮೀ ರಿಂದ 2.00 ಕಿಮೀ ವರೆಗೆ ಅಭಿವೃದ್ಧಿ ಪಡಿಸಲು ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ರೂ. 10.00 ಲಕ್ಷಗಳಷ್ಟು ಹಾಗೂ ಸರಪಳಿ 2.00 ಕಿಮೀ ರಿಂದ 8.00 ಕಿಮೀ ವರೆಗೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿಯಲ್ಲಿ ರೂ. 75.00 ಲಕ್ಷಗಳಷ್ಟು ಮಂಜೂರಾಗಿರುತ್ತದೆ.

ನಾಗರಹೊಳೆ: ಮೂರ್ಕಲ್ ರಸ್ತೆಯ 0.00 ರಿಂದ 5.70 ಕಿಮೀ ವರೆಗೆ ರೂ. 75.00 ಲಕ್ಷಗಳ ಅನುದಾನವು ಲೆಕ್ಕ ಶೀರ್ಷಿಕೆ 3054–ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ಬಿಡುಗಡೆಯಾಗಿದ್ದು, ಅಂದಾಜು ಪಟ್ಟಿ ತಯಾರಿ ಹಂತದಲ್ಲಿದೆ. ಹಾಗೂ ಇದೇ ರಸ್ತೆ ಕಿಮೀ 5.80 ರಿಂದ 7.80 ರವರೆಗೆ ಅಭಿವೃದಿಗಾಗಿ ರೂ. 15.00 ಲಕ್ಷ ಲೆಕ್ಕ ಶೀರ್ಷಿಕೆ 3054–ಯೋಜನೆಯಡಿ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ. ಮತ್ತು ಇದೇ ರಸ್ತೆ ಕಿಮೀ 8.00 ರಿಂದ 18.20 ಕಿಮೀ ವರೆಗೆ ಅಭಿವೃದ್ಧಿಗಾಗಿ ರೂ. 75.00 ಲಕ್ಷ ಮಂಜೂರಾಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಇ) ಬಾಳೆಲೆ–ಮೂರ್ಕಲ್ ರಸ್ತೆ : ರೂ. 1.65 ಲಕ್ಷ
ಕುಟ್ಟ–ನಾಗರಹೊಳೆ ರಸ್ತೆ : ರೂ. 85.00 ಲಕ್ಷ
ನಾಗರಹೊಳೆ–ಮೂರ್ಕಲ್ ರಸ್ತೆ : ರೂ. 165.00 ಲಕ್ಷ
ಒಟ್ಟು ರೂ. 251.65 ಲಕ್ಷ

321 (30) ಶ್ರೀ ಬಸವರಾಜು ಹೆಚ್.ಡಿ (ವಿರಾಜಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?